## ಆಗುವುದು ಇನ್ನೊಂದು

ನಮ್ಮೂರಿನ ಯುವಕ ಸಂಘದ ಕಾರ್ಯಕ್ರಮಕ್ಕೆ ಹೋಗಿದ್ದೆ. ಎಲ್ಲಾ ಕುರ್ಚಿಗಳು ತುಂಬಿದ್ದವು. ಆದರೆ ಎದುರಿಗಿರುವ ಹತ್ತಾರು ಕುರ್ಚಿಗಳು ಮಾತ್ರ ಖಾಲಿ ಇದ್ದವು. ಹೋಗಿ ಒಂದು ಕುರ್ಚಿಯ ಮೇಲೆ ಆರಾಮಾಗಿ ಕುಳಿತುಕೊಂಡೆ. ಅಷ್ಟರಲ್ಲೇ ಯುವಕನೊಬ್ಬ ಬಂದು ನಮಸ್ಕರಿಸುವ ಶೈಲಿಯಲ್ಲಿ ಬಗ್ಗಿ ನನ್ನ ಕಾಲುಗಳ ಮಂಡಿ ಹಿಡಿದುಕೊಂಡ. ಕಾರ್ಯಕ್ರಮ ಆಯೋಜಿಸಿದ ಈ ಯುವಕರು ಆಗಮಿಸಿದ ಎಲ್ಲರ ಕಾಲು ಹಿಡಿದು ನಮಸ್ಕರಿಸುವ ಪದ್ಧತಿ ಇಟ್ಟುಕೊಂಡಿರಬೇಕು ಎಂದು ಖುಷಿಪಡುತ್ತಿರುವಾಗ ಆ ಯುವಕ ನನ್ನ ಕಿವಿಯಲ್ಲಿ ‘ಇದು ಅತಿಥಿಗಳಿಗಾಗಿ ಇಟ್ಟ ಕುರ್ಚಿ. ಸ್ವಲ್ಪ ಹಿಂದಕ್ಕೆ ಹೋಗ್ತೀರಾ?’ ಎಂದು ನನ್ನ ಕಾಲು ತಳ್ಳುತ್ತ ಹೇಳಿದ!

**ದೇವಿದಾಸ ಸುವರ್ಣ**





## ಎಂಟರ್‌ಸಿಟಿ

ಇತ್ತೀಚೆಗೆ ಬೆಳಗ್ಗೆ ಐದೂ ಹದಿನೈದಕ್ಕೆ ಧಾರವಾಡದಿಂದ ಬಿಡುವ ಇಂಟರ್‌ಸಿಟಿ ಮೂಲಕ ಸಮಾರಂಭಕ್ಕೆಂದು ರಾಣೆಬೆನ್ನೂರಿಗೆ ಚಿಕ್ಕಮ್ಮನ ಮನೆಗೆ ಹೋಗಿದ್ದೆ. ಅವರ ಮನೆಯಲ್ಲಿದ್ದ ಸಂಬಂಧಿಕರು ‘ಎಂಟರ್‌ಸಿಟಿ ರೈಲಿಗೆ ಬಂದ್ರಾ?’ ಎಂದು ಕೇಳಿದರು. ಇವರಿಗೆ ಇಂಟರ್‌ಸಿಟಿ ಅನ್ನೋಕೆ ಬರೋದಿಲ್ಲವೇನೋ ಎಂದುಕೊಂಡೆ. ಅದನ್ನೇ ಚಿಕ್ಕಮ್ಮನಿಗೆ ಕೇಳಿದೆ ಕೂಡ. ಆಗ ಅವರು, ‘ಅಯ್ಯೋ, ಹಾಗೇನಿಲ್ಲ ಕಣೇ. ನಮ್ಮ ರಾಣೆಬೆನ್ನೂರಿಗೆ ಈ ಇಂಟರ್‌ಸಿಟಿ ರೈಲು ಧಾರವಾಡದಿಂದ ಬರುವಾಗ ಬೆಳಗ್ಗೆ ಎಂಟುಗಂಟೆಗೆ, ಬೆಂಗಳೂರಿನಿಂದ ಬರುವಾಗ ರಾತ್ರಿ ಎಂಟು ಗಂಟೆಗೆ ಬರುವುದರಿಂದ ಇಲ್ಲಿ ಎಲ್ಲರೂ ಅದನ್ನು ಎಂಟರ್‌ಸಿಟಿ ರೈಲು ಎನ್ನುತ್ತಾರೆ’ ಎಂದಾಗ ಅಲ್ಲಿನವರ ಹಾಸ್ಯಪ್ರಜ್ಞೆಗೆ ನಗು ಮೂಡಿತು.

**ನಳಿನಿ ಟಿ. ಭೀಮಪ್ಪ**